ಶ್ರೀ K R ರಮೇಶ್ ಕುಮಾರ್ ವಿರೋಧ ಪಕ್ಷ ನಾಯಕರು ಕೂಡ ಈ ವಿಷಯಚಲ್ಲಿ ಚರ್ಚೆಯಾಗಬೇಕೆಂದು ನೋಟಿಸ್ ತಮ್ಮ ಕಚೇರಿಗೆ ಕಳಿಸಿದ್ದಾರೆ ಮಾಧುಸ್ವಾಮಿ ಹೇಳಿದಂತೆ ಯಾವುದೇ ರೂಪದಲ್ಲಿ ಚರ್ಚೆಗೆ ತಗೊಂಡರೆ ಎಲ್ಲರೂ ಭಾಗವಹಿಸಲು ಆಗುತ್ತದೆ ದಯಮಾಡಿ ಇದನ್ನು ನಿಯಮ ೬೯ರ ಅಡಿಯಲ್ಲಿ ಅವಕಾಶ ಮಾಡಿಕೊಡಿ

ಉಪಾಧ್ಯಕರಷರು ೬೯ ಕ್ಕೆ ಇನ್ನೂ ನೋಟೀಸ್ ಬಂದಿಲ್ಲ, ನೋಟೀಸ್ ಕಳಿಸಿಕೊಡಿ

ಆ ಬಿದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕು ಸಿದ್ದಟೈಹಳ್ಳಿ ಗ್ರಾಮದಲ್ಲಿ ರೈತನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ

ಶ್ರೀ ಮೀರಾಜುದಿನ್ ಪಟೇಲ್ (ಹುಮ್ನಾಬಾದ್) ಅಧ್ಯಕ್ಷರೇ ಬೀದರ್ ಜಿಲ್ಲೆ ಹುಮ್ನಾಬಾದ್ ನನ್ನ ಕ್ಷೇತ್ರದಾಗೆ ಸಿದ್ದಟ್ನಹಳ್ಳಿ ಗ್ರಾಮದಲ್ಲಿ ೨೨ನೇ ತಾರೀಖು ಶಿವಾನಂದ ವೀರ್ ಶೆಟ್ಟಿ ಗ್ರಾದರ್ ಎಂಬ ರೈತ ಸಮಯಾನುಸಾರ factory ಯವರು ಒಯ್ಯದ ಕಾರಣ ಆತ್ಮಹತ್ಯೆ ಮಾಡಕೊಂಡಿದ್ದಾನೆ ಕರ್ನಾಟಕವಷ್ಟೇ ಅಲ್ಲ ಭಾರತ ದೇಶದಲ್ಲೇ ಇದು ಮೊದಲ ಬಾರಿ ಕಬ್ಬು ಬೆಳೆಗಾರನೊಬ್ಬ ಆತ್ಮಹತ್ಯೆ ಮಾಡಕೊಂಡಿದ್ದು, ರೈತರಿಗೆ ಮೂರು ತಿಂಗಳಾದರೂ ಕಬ್ಬು ಹಾಕಿದ್ದರೆ ಪೇಮೆಂಟ್ ಮಾಡಲಿಲ್ಲ ಅದರ ಬಗ್ಗೆ ಸಕ್ಕರೆ ಸಚಿವರು ಗೃಹಸಚಿವರು ಆಶ್ವಾಸನೆ ಕೊಟ್ಟಿದ್ದರು ೧೫ ದಿವಸದಲ್ಲಿ ಸರಿಪಡಿಸೋಣ ಅಂತ ಈಗ ೩ factory ಗಳಿಗೆ ೪೫ ಕೋಟಿ ಬಿಡುಗಡೆ ಮಾಡಿದ್ದಾರೆ ಅದಕ್ಕಾಗಿ ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಸಕ್ಕರೆ ಸಚಿವರನ್ನು ನಾನು ಅಭಿನಂದಿಸುತ್ತೇನೆ ಈಗ ನಮ್ಮ incharge minister ಒಂದು statement ಕೊಟ್ಟಿದ್ದಾರೆ ೧೫೦ ಲಕ್ಷ ಟನ್ ಇನ್ನೂ ಉಳಿಯುತ್ತದೆ ಅಂತ ಅದು ಮುಂದಿನ ವರ್ಷ ಒಯ್ಯುತ್ತಾರೆ? ರೈತರು ನೂರು ಟನ್ ಕಬ್ಬು factory ಗೆ ಹಾಕಿದರು ಅಂದರೆ ಕಟಾವ್ ಮಾಡುವವರು ೧೦ ಸಾವಿರ ರೂ ಕೇಳುತ್ತಾರೆ ಲಾರಿಯವರು ೨೦೦ ರೂ ಕೇಳುತ್ತಾರೆ ಈ ರೀತಿ mis management ಆಗಿ ಹಿಂದೆ ಡಿಸೆಂಬರ್ರು ಪೆಂಡಿಂಗ್ ಇಟ್ಟು ಜನವರಿದು ಕಬ್ಬು

ಒಯ್ಯತ್ತಿದ್ದಾಖುಎ ಈ ಕಾರಣಕ್ಕೇ ಸಣ್ಣ ಅತಿಸಣ್ಣ ರೈತರ ೧೫೦ ಲಕ್ಷ ಟನ್ ಉಳಿದುಬಿಡುತ್ತದೆ ಎರಡನೆಯದು ಇನ್ನೂ ಜನವರಿ ತಿಂಗಳ ಕಬ್ಬೇ ಒಯ್ದಿಲ್ಲ ಇನ್ನು february ದು ಹೇಗೆ ಒಯ್ತಾರೆ ಅಂತ ಅವರಿಗೆಲ್ಲ ಭಯ ಬಂದಿದೆ ಮುಂದೆ ಏಪ್ರಿಲ್ ನಲ್ಲಿ recovery down ಆದರೆ factory ಮುಚ್ಚಿಬಿಡುತ್ತಾರೆ ಆಗ ಈಗ ಉಳಿದಿರುವ ಕಬ್ಬು ಎಲ್ಲಿಗೆ ಹೋಗಬೇಕು ? ಅದಕ್ಕೇ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ವಿಚಾರಿಸಿ ಅವರಿಗೆ incentive ಕೊಡುವ ವ್ಯವಸ್ಥೆ ಮಾಡಿ ರೈತರ ಕಬ್ಬು ಉಳಿಯದಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಕೇಳುತ್ತೇನೆ ಮತ್ತು ಆತ್ಮಹತ್ಯೆ ಮಾಡಿಕೊಂಡಿರುವ ಶಿವಾನಂದ ವೀರಶೆಟ್ಟಿ ಗ್ರಾದರ್ ಗೆ ಪರಿಹಾರ ಕೊಡುತ್ತೇನೆ ಮತ್ತು ಆತ್ಮಹತ್ಯೆ ಮಾಡಿಕೊಂಡಿರುವ ಶಿವಾನಂದ ವೀರಶೆಟ್ಟಿ ಗ್ರಾದರ್ ಗೆ ಪರಿಹಾರ ಕೊಡುವಿದಿದ್ದರೆ ಶ್ರೀಘ್ರವಾಗಿ ಸರ್ಕಾರ ಕೊಡಬೇಕು ಸಚಿವರು ಮಾಡಿರುವ ಹೇಳಿಕೆಯಲ್ಲಿ ಅವರ ಕಬ್ಬನ್ನು ಈಗ ಕಟಾವ್ ಮಾಡಿ factory ಗೆ ಒಯ್ಯಲಾಗಿದೆ ಎಂದಿದ್ದಾರೆ ಇದೇ cutting order ಮೊದಲೇ ಕೊಟ್ಟಿದ್ದರೆ ಆ ಸಾವೇ ಆಗುತ್ತಿರಲಿಲ್ಲ ಯಾರ್ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅವರ ಕಬ್ಬು ಒಯ್ಯಬೇಕು ಅಂತ ನಿರ್ಧಾರ ಮಾಡಿದ್ದಾರೆ ಅಂತನ್ನಿಸುತ್ತದೆ ಇದು ಸರಿಯಿಲ್ಲ ಅಲ್ಲೇನು corruption ನಡೀತಿದೆ ಅದನ್ನು ಕಂಟ್ರೋಲ್ ಮಾಡಬೇಕು Sugar Director ಅಥವಾ ಸಚಿವರ ಕಚೇರಿಯಿಂದ inspection ಮಾಡಿ ಈಗೇನು ೪೫ ಕೋಟು ಮಂಜೂರು ಮಾಡಿದ್ದೀರಿ ಅದನ್ನು ರೈತರ ಬಾಕಿ ಹಣಕ್ಕೆ ಪಾವತಿ ಮಾಡಲು ಉಪಯೋಗಿಸಬೇಕು ಹಾಗೂ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಕ್ಕೆ ಏನಾದರೂ ಪರಿಹಾರ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಶ್ರೀ ಗೋವಿಂದ ರಾಜೋಳ ಎಂ (ಆಹಾರ ಸಚಿವರು)

ಹುಮ್ನಾಬಾದ್ ಕ್ಷೇತ್ರದಲ್ಲಿ ರೈತರೊಬ್ಬರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗದೇ ಇರುವುದರಿಂದ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ –

ಜಿಲಾಧಿಕಾರಿಗಳು, ಬೀದರ್ ರವರು ಶ್ರೀ ಶಿವಾನಂದ ವೀರಶೆಟ್ಟಿ ಬಿರಾದರ ಎಂಬ ೪೫ ವರ್ಷ ವಯಸ್ಸಿನ ಶಿರಕಟನಹಳ್ಳಿ ಗ್ರಾಮದ ನಿವಾಸಿ

೨೨ ೦೩ ೨೦೦೭ ರಂದು ಬೆಳಗ್ಗೆ ೭ ೦೦ ಘಂಟೆಗೆ ವಿಷ ಸೇವಿಸಿ ಹಿರಿಯ ಮಗಳಾದ ಕು ಚನ್ನಮ್ಮ ಇವಳ ಮದುವೆಯ ಚಿಂತೆಯಲ್ಲಿದ್ದರು ಹಾಗೂ ಈ ಕೆಳಕಂಡ ಬ್ಯಾಂಕುಗಳಿಂದ ಹಾಗೂ ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದಿದ್ದರೆಂದು ಗ್ರಾಮಸ್ಥರು ತಿಳಿಸಿರುವುದಾಗಿ ಜಿಲ್ಲಾಧಿಕಾರಿಯವರು ವರದಿ ಮಾಡಿರುತ್ತಾರೆ

ಕ್ರ.ಸಂಖ್ಯೆ	ಯಾರಿಂದ ಸಾಲ ಪಡೆದಿರುವುದು	ಸಾಲದ ಮೊತ್ತ
೧	ಸಹಕಾರ ಸಂಘದ ಬ್ಯಾಂಕ್ (ಏಎಸ್ಎಸ್)	೭೭೮೨೦ ೦೦
೨	ಪಿ ಎಲ್ ಡಿ ಬ್ಯಾಂಕ್	೫೦ ೦೦೦ ೦೦
೩	ಖಾಸಗಿ ವ್ಯಕ್ತಿಗಳಿಂದ	೨ ೦೦ ೦೦೦ ೦೦

ಮೃತರು ಮಗಳ ಮದುವೆಯ ಚಿಂತೆಯಿಂದ ಹಾಗೂ ಸಾಲ ಇದ್ದುದರಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಗ್ರಾಮಸ್ಥರು ತಿಳಿಸಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ

ಮೃತರು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಚೇರುದಾರರಾಗಿದ್ದು ೨೦೦೫–೦೬ನೇ ಸಾಲಿನಲ್ಲಿ ೦೮ ೦೩ ೨೦೦೬ ಹಾಗೂ ೧೦ ೦೩ ೨೦೦೬ ರಂದು ೧೮೨೧೫ ಮೆ ಟನ್ ಸರಬರಾಜು ಮಾಡಿದ ಕಬ್ಬಿಗೆ ರೂ ೨೦,೦೩೭/– ನ್ನು ಈಗಾಗಲೇ ನೀಡಲಾಗಿರುತ್ತದೆ ಪ್ರಕಸ್ತ ಸಾಲಿನಲ್ಲಿ ೧ ೩೮ ಎಕರೆ ಜಮೀನಿನಲ್ಲಿ ಕಬ್ಬನ್ನು ಬೆಳಡಸಿದ್ದು ಕಬ್ಬಿನ ಕಟಾವಣಿಯನ್ನು ಬೀದರ್ ಸಹಕಾಖ ಸಕ್ಕರೆ ಕಾರ್ಖಾನೆಯವರು ದಿನಾಂಕ ೨೯ ೦೩ ೨೦೦೭ಕ್ಕೆ ನಿಗದಿ ಮಾಡಿದ್ದು ಕಬ್ಬು ಕಟಾವು ಅವಧಿಯಲ್ಲಿ ಯಾವುದೇ ರೀತಿಯ ವಿಳಂಬವಾಗಿರುವುದಿಲ್ಲವೆಂದು ವರದಿಯಾಗಿದೆ

ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಸುಮಾರು ೨೨ ರೂ ಲಕ್ಷ ಟನ್ ಕಬ್ಬು ಉತ್ಪಾದನೆಯಾಗಿದ್ದು ಅದರ ಬಳಕ ಈ ಕೆಳಕಂಡಂತ್ತಿರುತ್ತದೆ

ಸಕ್ಕರೆ ಕಾರ್ಖಾನೆಗಳಿಗೆ	೧೮ ೦೦ ಲಕ್ಷ ಟನ್
ಬಂಡಸಾರಿಗಳಿಗೆ	೦೧ ೪೭ ಲಕ್ಷ ಟನ್

ಬೆಲ್ಲ, ಬೀಜೋತ್ಪಾದನೆ ಹಾಗೂ ಇತರೆ ಉದ್ದೇಶಗಳಿಗೆ	೦೩.೧೨ ಲಕ್ಷ ಟನ್
ಒಟ್ಟು	೨೨.೫೯ ಲಕ್ಷ ಟನ್

ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ವರ್ಷದಲ್ಲಿ ೧೮ ಲಕ್ಷ ಟನ್ ಕಬ್ಬು ಸುರಿಸುವ ಗುರಿ ಇದ್ದು ದಿನಾಂಕ ೧೪.೦೩.೨೦೦೭ರ ವರೆಗೆ ೧೧.೧೧ ಲಕ್ಷ ಟನ್ ಕಬ್ಬನ್ನು ಈಗಾಗಲೇ ನುರಿಸಲಾಗಿದ್ದು, ಇನ್ನೂ ೬.೮೯ ಲಕ್ಷ ಮೆ.ಟನ್ ಕಬ್ಬು ಸುರಿಸಲು ಬಾಕಿ ಇದ್ದು, ಇದನ್ನು ಸುರಿಸಲಾಗುವುದು ಇದಲ್ಲದೆ ಸಹಕಾಖಇ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಗೆ ಅನುಕೂಲವಾಗುವಂತೆ ನಾರಂಜಿ ಹಾಗೂ ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆಗಳಿಗೆ ಎಸ್.ಸಿ.ಡಿ.ಸಿ. ಯಿಂದ ತಲಾ ೧೫ ಕೋಟಿಗಳಂತೆ ದುಡಿಯುವ ಬಂಡವಾಳವನ್ನೂ ಸಹಾ ಮಂಜೂರು ಮಾಡಿದ್ದು, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ೧೫ ಕೋಟಿ ದುಡಿಯುವ ಬಂಡವಾಳ ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಮೃತರ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸರದಿಯ ಪ್ರಕಾರ ೨೯.೦೩.೨೦೦೭ರಂದು ಕಟಾವು ಮಾಡಲು ನಿಗಧಿಯಾಗಿರುತ್ತದೆ ಆದುದರಿಂದ ಕಬ್ಬು ಕಟಾವು ಅಥವಾ ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗದೇ ಇರುವುದೊಂದೆ ಆತ್ಮಹತ್ಯೆಗೆ ಕಾರಣವಾಗಿರುವುದಿಲ್ಲ ಮಿರಾಜುದ್ದೀನ್ ಪಟೇಲರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ, ಕಬ್ಬು ಕಾರ್ಖಾನೆಗೆ ಕಳುಹಿಸಬೇಕಾದರೆ ಅಲ್ಲಿ ಭ್ರಷ್ಟಾಚಾರ ನಡೆಯುತ್ತದೆ, ಪಕ್ಷಪಾತ ನಡೆಯುತ್ತದೆಂಬ ಮಾತನ್ನು ಹೇಳಿದ್ದಾರೆ ಅಂತಹ ನಿರ್ದಿಷ್ಟವಾದ ಪ್ರಕರಣಗಳಿದದರೆ, ಸರ್ಕಾರ ಕೂಡಲೇ ತನಿಖೆ ಮಾಡಿಸುವ ಮೂಲಕ ಅಂತಹ ಕಾರ್ಖಾನೆಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ